ಅ) ಜಿಲ್ಲಾ ಜಾನುವಾರು ಕ್ಷೇತ್ರದಲ್ಲಿ ಈ ವ್ಯಕ್ತಿಗಳು ತಮಗೆ ಮನಸ್ಸು ಬಂದಂತೆ ವರ್ತಿಸಿ ಅಲ್ಲಿ ಕಿರುಕುಳ ಕೊಡುತ್ತಿರುವ ವಿಷಯ ಸರ್ಕಾರದವರಿಗೆ ತಿಳಿದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಉನ್ನತ ಅಧಿಕಾರಿಗಳಿಂದ ಸೂಕ್ತ ತನಿಖೆ ನಡೆಸಲಾಗುವುದೆ ?

ಶ್ರೀ ಕೃಷ್ಣ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ) ಬಂದಿದೆ.

ಆ) ಇಲ್ಲ (ಆದರೆ ಈ ನೌಕರರ ವರ್ತನೆ ಬಗ್ಗೆ ಮೂರು ಅರ್ಜಿ ಬಂದಿರುತ್ತದೆ)

ಇ) ತನಿಖೆ ನಡೆಸಲಾಗಿದೆ. ಸದರಿ ವ್ಯಕ್ತಿಗಳನ್ನು ಬೇರೆ ಕಡೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗಿದೆ.

ಹಾಲಿನ ಲೀಟರೊಂದರ ಬೆಲೆಯನ್ನು ನಿಗದಿ ಪಡಿಸುವ ಬಗ್ಗೆ.

೨೯೫೮. ಶ್ರೀ ಆರ್. ವೆಂಕಟರಾಮಯ್ಯ (ಮಾಳಬಾಗಿಲು).—ಮಾನ್ಯ ಪಶು ಸಂಗೋಪನೆ ಹಾಗೂ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದವರು ವೈಜ್ಞಾನಿಕ ತಳಹದಿಯ ಮೇಲೆ ಹಾಲಿನ ಲೀಟರೊಂದರ ಬೆಲೆಯನ್ನು ನಿಗದಿಪಡಿಸಲು ಕ್ರಮ ಕೈಗೊಂಡಿರುವರೇ ?

ಆ) ಹಾಲು ಉತ್ಪಾದಕರ ಸಂಘ ಹಾಗೂ ಜಿಲ್ಲಾ ಒಕ್ಕೂಟಗಳು ಲೀಟರೊಂದಕ್ಕೆ ರೂ ೧.೨೦ ಪೈಸೆಯನ್ನು ನಿರ್ವಹಣೆ ವೆಚ್ಚಕ್ಕಾಗಿ ತೆಗೆದು ಕೊಳ್ಳುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಸರ್ಕಾರದವರು ಈ ಹಣವನ್ನು ನೇರವಾಗಿ ಉತ್ಪಾದಕರಿಗೆ ತಲುಪಿಸಲು ಕ್ರಮ ಜರುಗಿಸುವುದೇ ?

ಶ್ರೀ ಕೃಷ್ಣ (ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವರು).—

ಅ) ಹೌದು.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಬೆಂಗಳೂರು ಡೈರಿಯಿಂದ ಹಾಲು ಮಾರಾಟದ ಏಜೆಂಟ್‌ರಿಗೆ ನೀಡುತ್ತಿರುವ ಕಮಿಷನ್

೩೦೨೪. ಶ್ರೀ ಪಿ ಸಿ. ಮುನಿಸ್ವಾಮಯ್ಯ (ದೇವನ ಹಳ್ಳಿ).—ಮಾನ್ಯ ಪಶು ಸಂಗೋಪನೆ ಹಾಗೂ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಲಿ ಬೆಂಗಳೂರು ನಗರದಲ್ಲಿನ ಬಲ್ಕ್ ವೆಂಡಿಂಗ್ ಬೂತ್‌ಗಳ ಮೂಲಕ ಹಾಲು ಮಾರಾಟ ಮಾಡುವವರಿಗೆ ಕೊಡಂತ್ತಿರುವ ಕಮಿಷನ್ ಎಷ್ಟು ?

ಆ) ಬೆಂಗಳೂರು ಡೈರಿಯಿಂದ ಹಾಲು ಮಾರಾಟದ ಏಜೆಂಟರಿಗೆ ನೀಡುತ್ತಿರುವ ಕಮಿಷನ್ ಎಷ್ಟು ?

ಇ) ಬಲ್ಕ್ ವೆಂಡಿಂಗ್ ಬೂತ್‌ಗಳ ಮೂಲಕ ಹಾಲು ಮಾರಾಟ ಮಾಡುವವರಿಂದ ಕಮೀಷನ್ ಹೆಚ್ಚಿಸಲು ಸರ್ಕಾರಕ್ಕೆ ಮನವಿ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರವು ಕಮೀಷನ್ನನ್ನು ಕನಿಷ್ಠ ೬ ಪೈಸೆಗೆ ಹೆಚ್ಚಿಸಲು ಪರಿಗಣಿಸುವುದೇ ?